ಎನ್ನುವ ಆ ತೀರ್ಮಾನವನ್ನು ನಾವು ಯುನಾನಿಮಸ್ ಆಗಿ ತೆಗೆದುಕೊಂಡೆವು. ಅದನ್ನು ತೆಗೆದುಕೊಳ್ಳುವುದರಲ್ಲಿ ಕೂಡ ಅವರು ಸಹಕಾರ ಕೊಟ್ಟಿದ್ದಾರೆ. ಅದನ್ನು ವಿರೋಧ ಮಾಡಿಲ್ಲ, ಬೆಳೆ ಕೊಡು ಎನ್ನತಕ್ಕಂಥ ಯೋಚನೆ ಅವರು ಮಾಡಿಲ್ಲ, 74 ಅಡಿವರೆಗೆ ಕೂಡ ನೀರು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಏಕೆಂದರೆ he is seriously worried ಏನು ಟ್ಯಾಕಲ್ ಮಾಡಿದರೆ ಆಗುತ್ತದಪ್ಪಾ ಎನ್ನುವುದರ ಬಗ್ಗೆ, ಅದನ್ನು ಅವರು ಒಬ್ಬರಾಗಿ ಮೂರು ವರ್ಷದಿಂದ ಸತತವಾಗಿ ಇರುವಂಥ ಬರವನ್ನು ಎಫೆಕ್ಟೀವ್ ಆಗಿ ಇದ್ದಂಥ ರಿಸೋರ್ಸಸ್‌ನಲ್ಲಿ ಮ್ಯಾನೇಜ್ ಮಾಡಿರತಕ್ಕಂಥದ್ದಕ್ಕೋಸ್ಕರ ನಾನು ತಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ವಂದನೆಯನ್ನು ಸಲ್ಲಿಸುತ್ತಾ, ಬರ ವಿಚಾರವಾಗಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಉಪಾಧ್ಯಕ್ಷರು:– ಈಗ ಸದನವನ್ನು ನಾಳೆ ದಿನಾಂಕ 17ನೇ ಜುಲೈ 2003 ರಂದು ಬೆಳಿಗ್ಗೆ 11–00 ಗಂಟೆವರೆಗೆ ಮುಂದುಡಿತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 37 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 17ನೇ ಜುಲೈ 2003ರ ಗುರುವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು).

6. ಅನುಬಂಧ 1

ಸೂಳ್ಯ ಕ್ಷೇತ್ರ ವ್ಯಾಪ್ತಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸುವ ಬಗ್ಗೆ

2862(3383): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡೆ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ; ಪೂರ್ಣ ವಿವರ ನೀಡುವುದು;

ಆ) ಹಾಗಿದ್ದಲ್ಲಿ, 8ನೇ ತರಗತಿಗೆ ಅವಶ್ಯಕತೆಯಿರುವ ಅಧ್ಯಾಪಕರನ್ನು ಒದಗಿಸಲಾಗಿದೆಯೆ; ಇಲ್ಲದಿದ್ದರೆ, ಎಷ್ಟು ಸಮಯದಲ್ಲಿ ಅಧ್ಯಾಪಕರನ್ನು ಒದಗಿಸಲಾಗುವುದು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಸೂಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 3 ಕಡೆ ಹಿರಿಯ ಪ್ರಾಥಮಿಕ ಶಾಲೆಗಳನ್ನು 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ.

1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಣ್ಣೂರು
2. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಲ್ಮಡಕ
3. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಲ್ಲಾರು

ಆ) ಹೊಸದಾಗಿ ಪ್ರಾರಂಭವಾದ 8ನೇ ತರಗತಿಯ ಶಾಲೆಗಳಿಗೆ ಅರ್ಹ ಶಿಕ್ಷಕರನ್ನು ನಿಯೋಜಿಸಿಕೊಳ್ಳುವ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಹಾಗೂ ಕ್ರಮಬದ್ಧ ಖಾಯಂ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿ ವಿವರ

2864(3385): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?